ಸಾಕ್ಷಿಯನ್ನು ದಿನಾಂಕಃ 24-04-2025ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಎಮ್.ಭಂಡಾರಿರವರಿಂದಃ

ನಾನು ತನಿಖಾಧಿಕಾರಿಯಾಗುವ ಮೊದಲು ಸುಮಾರು 5ವರ್ಷಗಳ ಕಾಲ ಪೋಲೀಸ್ ಪೇದೆಯಾಗಿ ಹೊನ್ನಾವರದಲ್ಲಿ ಕೆಲಸ ಮಾಡಿರುತ್ತೇನೆ. ಹೊನ್ನಾವರದಲ್ಲಿ ಯಾವ ಊರು ಯಾವ ಕಡೆ ಇದೆ ಎಂಬ ಬಗ್ಗೆ ಭೌಗೋಳಿಕ ಮಾಹಿತಿ ಸ್ವಲ್ಪ ಗೊತ್ತು. ಒಂದು ಪಂಚಾಯತಿಯಿಂದ ಇನ್ನೊಂದು ಪಂಚಾಯತಿಯು ಸುಮಾರು 6ರಿಂದ 10 ಕಿಲೋಮೀಟರ್ ದೂರದಲ್ಲಿದೆ. ಆರೋಪಿತರ ಮೇಲೆ ನಾನು ಸುಮಾರು 9 ದೋಷಾರೋಪಣ ಪಟ್ಟಿ ಸಲ್ಲಿಸಿದ್ದು 9 ಪ್ರಕರಣದಲ್ಲಿಯೂ ಘಟನಾ ಸ್ಥಳ ಬೇರೆ ಬೇರೆ ಪಂಚಾಯತಿ ವ್ಯಾಪ್ತಿಯಲ್ಲಿ ಇವೆ. ಆದರೆ 3 ಪ್ರಕರಣಗಳು ಚಂದಾವರ ಪ್ರಕರಣದ ವ್ಯಾಪ್ತಿಯಲ್ಲಿದೆ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿತರನ್ನು ಮೊದಲನೇ ಬಾರಿಗೆ ಚಂದಾವರದಲ್ಲಿ ನೋಡಿರುತ್ತೇನೆ. ಅದಕ್ಕೂ ಮೊದಲು ನೋಡಿರಬಹುದು ಆದರೆ ಅವರ ಗುರುತು ಪರಿಚಯ ಇರುವುದಿಲ್ಲ. ದಿನಾಂಕ 31-07-2020ರಂದು ಆರೋಪಿತರು ಬೈಕನಲ್ಲಿ ಬರುತ್ತಿದ್ದಾಗ 1ನೇ ಆರೋಪಿ ಬೈಕನ್ನು ಓಡಿಸುತ್ತಿದ್ದನು. 2ನೇ ಆರೋಪಿ ಹಿಂದುಗಡೆ ಕುಳಿತಿದ್ದನು. ಅವರನ್ನು ಕಡತೋಕಾ ಜಡ್ಡಿಗದ್ದೆಯ ಹತ್ತಿರ ಗಸ್ತು ಮಾಡುತ್ತಿರುವಾಗ ನೋಡಿರುತ್ತೇನೆ. ಚಂದಾವರ ಜಡ್ಡಿಗದ್ದೆ ರಸ್ತೆಯು ದಕ್ಷಿಣೋತ್ತರವಾಗಿದ್ದು ಸದರಿ ರಸ್ತೆಯ ಪಶ್ಚಿಮಕ್ಕೆ ಕಡತೋಕಾಕ್ಕೆ ಹೋಗುವ ರಸ್ತೆ ಕೂಡುತ್ತದೆ ಎಂದರೆ ಸರಿ. ಅವರು ಚಂದಾವರ ಕಡೆಯಿಂದ ಬರುತ್ತಿದ್ದು ಉತ್ತರದಿಂದ ದಕ್ಷಿಣಾಭಿಮುಖವಾಗಿ ಬರುತ್ತಿದ್ದರು. ಅವರು ಚಂದಾವರ ಕಡೆಯಿಂದ ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದರು. ಕಡತೋಕಾ ಹತ್ತಿರ ರಸ್ತೆಯ ಬಲಬದಿಯಲ್ಲಿ 6-7 ಅಂಗಡಿಗಳು ಇವೆ ಎಂದರೆ ಆರೋಪಿತರನ್ನು ಹಿಡಿದ ಸ್ಥಳದಲ್ಲಿ ಇಲ್ಲ. ಸ್ವಲ್ಪ ದೂರದಲ್ಲಿ ಇದೆ ಎನ್ನುತ್ತಾರೆ. ಆರೋಪಿತರನ್ನು ಹಿಡಿದ ನಂತರ ಅವರನ್ನು ಇಲಾಖಾ ವಾಹನದಲ್ಲಿ ಕುಳ್ಳಿರಿಸಿಕೊಂಡಿದ್ದು ಆರೋಪಿತರು ಬರುತ್ತಿದ್ದ ಬೈಕನ್ನು ಸಿಬ್ಬಂದಿಯಾದ ಕೃಷ್ಣ ಗೌಡರವರು ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. 05-00 ಗಂಟೆಗೆ ಆರೋಪಿತರನ್ನು ಹಿಡಿದಿದ್ದು ಸದರಿ ಸ್ಥಳದಲ್ಲಿ 05-15ರ ವೇಳೆಗೆ ಠಾಣೆಗೆ ಹೊರಟಿದ್ದು 05-45ರ ವೇಳೆಗೆ ಠಾಣೆಗೆ ಬಂದಿರುತ್ತೇವೆ. ಆರೋಪಿತರನ್ನು ಠಾಣೆಗೆ ಕರೆತಂದ ನಂತರ ಅವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸ್ವ ಖುಷಿ ಹೇಳಿಕೆಯನ್ನು ಸಿಬ್ಬಂದಿಯವರ ಮೂಲಕ ಕಂಪ್ಯೂಟರನಲ್ಲಿ ತಯಾರಿಸಿರುತ್ತೇನೆ. ನಾನು ಆರೋಪಿತರನ್ನು ಮೇಲೆ ಹೇಳಿರುವಂತೆ ಜಡ್ಡಿಗದ್ದೆಯ ಹತ್ತಿರ ಹಿಡಿದೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಸ್ವ ಖುಷಿ ಹೇಳಿಕೆ ನೀಡಿಲ್ಲ, ಕೇಸಿಗೆ ಅನುಕೂಲವಾಗುವಂತೆ ನಾವೇ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರನ್ನು ಬಂಧಿಸುವ ಕಾಲಕ್ಕೆ ಬಂಧನದ ವಿಚಾರವನ್ನು ಅವರ ಮನೆಯವರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ. ಆರೋಪಿತರ ತಾಯಿ ಮತ್ತು ತಂಗಿಯರಿಗೆ ವಿಚಾರ ತಿಳಿಸಿರುತ್ತೇನೆ. ಆರೋಪಿತರನ್ನು ಬಂಧಿಸಿದ ವಿಚಾರವನ್ನು ಅವರ ಮನೆಗೆ ತಿಳಿಸದೇ ಬಲವಂತವಾಗಿ ಅವರನ್ನು ಬಂಧಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಬೆದರಿಸಿ ಸ್ವ ಇಚ್ಛಾ ಹೇಳಿಕೆಗೆ ಸಹಿ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಚಾ.ಸಾಃ 14, ಫ್ರಾ.ಸಾಃ 8**

ಈ ಪ್ರಕರಣದ ಕಳುವು ಮಾಲಿಗೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಪಿರ್ಯಾದಿಯ ಮನೆಯ ಹತ್ತಿರ ಕರೆದುಕೊಂಡು ಹೋಗಿಲ್ಲ ಮತ್ತು ಯಾವ ಆರೋಪಿತರೂ ಕಳುವು ಮಾಡಿರುವುದಾಗಿ ಮನೆಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮಾಹಿತಿಯಂತೆ ಯಾವುದೇ ಆಭರಣಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 2020ರ ಕಾಲಕ್ಕೆ ಹೊನ್ನಾವರದಲ್ಲಿ ಕಳ್ಳತನದ ಪ್ರಕರಣಗಳು ಸಾಕಷ್ಟು ಆಗುತ್ತಿದ್ದುದರಿಂದ ಮೇಲಧಿಕಾರಿಗಳ ಒತ್ತಾಯದ ಮೇರೆಗೆ ಆರೋಪಿತರನ್ನು ಈ ಪ್ರಕರಣದಲ್ಲಿ ಸಿಕ್ಕಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**